ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

GULBARGA UNIVERSITY

"JNANA GANGA" KALABURAGI-585106, KARNATAKA, INDIA

EXAMINATION BRANCH

Phone: 08472- 263203 e-Mail: regegug@rediffmail.com, rege@gug.ac.in

ಸಂಖ್ಯೆ:ಗುವಿಕ/ಪರೀಕ್ಷಾ/ಆ.ಕಾ./2026–27/2117 ದಿನಾಂಕ: 12.11.2026

ಸುತ್ತೋಲೆ

ವಿಷಯ: ಪದವಿ ಕೋರ್ಸಿನ ಪರೀಕ್ಷಾ ಕೇಂದ್ರಗಳಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳು ಹೊಂದಿರುವ ಬಗ್ಗೆ ಮಾಹಿತಿ ಸಲ್ಲಿಸುವ ಕುರಿತು.

ಉಲ್ಲೇಖ: 1) ದಿನಾಂಕ 04.11.2026 ರಂದು ಜರುಗಿದ ಪ್ರಾಂಶುಪಾಲರ ಸಭೆಯ ನಿರ್ಣಯ.

ಮೇಲ್ಕಾಣಿಸಿರುವ ವಿಷಯಕ್ಕೆ ಸಂಬಂಧಿಸಿರುವಂತೆ, ದಿನಾಂಕ 04.11.2026 ರಂದು ಜರುಗಿದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರ ಸಭೆಯಲ್ಲಿ ಚರ್ಚಿಸಿರುವಂತೆ, ಮುಂಬರುವ ಪದವಿ ಕೋರ್ಸಿನ ಪರೀಕ್ಷೆಗಳಿಗಾಗಿ ನೀಡಬೇಕಾಗಿರುವ ಪರೀಕ್ಷಾ ಕೇಂದ್ರಗಳು ಕಡ್ಡಾಯವಾಗಿ ಹೊಂದಿರಬೇಕಾದ ಮೂಲಭೂತ ಸೌಲಭ್ಯಗಳ ಕುರಿತು ಪರೀಕ್ಷಾ ಕೇಂದ್ರಗಳ ಪ್ರಾಂಶುಪಾಲರು ಈ ಕೆಳಕಂಡ ಸೌಲಭ್ಯಗಳನ್ನು ಹೊಂದಿರುವ ಬಗ್ಗೆ ದಾವಿಲಾತಿ ಹಾಗೂ ವಿವರಗಳೊಂದಿಗೆ ದಿನಾಂಕ 20.11.2026 ರೊಳಗಾಗಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

ಪರೀಕ್ಷಾ ಕೇಂದ್ರಗಳು ಕಡ್ಡಾಯವಾಗಿ ಹೊಂದಿರಬೇಕಾದ ಸೌಲಭ್ಯಗಳು

1) ಕಾಲೇಜಿಗೆ ನೆಟ್‌ವರ್ಕಿಂಗ್ ಸಿಸ್ಟಮ್ (ವೈಫೈ (WiFi) ಸೌಲಭ್ಯ)
2) ನಿರಂತರ ವಿದ್ಯುತ್ ಸರಬರಾಜು ವ್ಯವಸ್ಥೆ (ಯುಪಿಎಸ್ (UPS) ಸೌಲಭ್ಯ)
3) ಕಾಪೀಯರ್ ಮಶೀನ್ (ಝರಾಕ್ಸ್ (Xerox) ಸೌಲಭ್ಯ)
4) ಕಾಲೇಜಿನ ಎಲ್ಲಾ ಪರೀಕ್ಷಾ ಕೊಠಡಿ ಸೇರಿದಂತೆ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಪ್ಯಾಕ್ ಮಾಡುವ ಹಾಗೂ ಪ್ರಶ್ನೆಪತ್ರಿಕೆ / ಉತ್ತರ ಪತ್ರಿಕೆ ಸಂಗ್ರಹಿಸುವ ಕೊಠಡಿಗಳಿಗೆ ಕ್ಯಾಮರಾ (CCTV Camera) ಸೌಲಭ್ಯ.
5) ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಎಲ್ಲಾ ಮೂಲಭೂತ ಸೌಲಭ್ಯಗಳ ಲಭ್ಯತೆಯ ಬಗ್ಗೆ ಖಚಿತಪಡಿಸತಕ್ಕದ್ದು.
6) ಪರೀಕ್ಷಾ ಕೇಂದ್ರದಲ್ಲಿ ಪ್ರಶ್ನೆಪತ್ರಿಕೆ/ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಸಂಗ್ರಹಿಸಿಡಲು ಭದ್ರಕೊಠಡಿ ಸೌಲಭ್ಯ.
7) ಪರೀಕ್ಷಾ ಕೇಂದ್ರ ಪಡೆಯಲು ಅಗತ್ಯವಿರುವ ಕನಿಷ್ಟ ವಿದ್ಯಾರ್ಥಿಗಳ ಕೋರ್ಸುವಾರು ಹಾಗೂ ಸೆಮೆಸ್ಟರ್‌ವಾರು ಮಾಹಿತಿಯನ್ನು ನೀಡುವುದು.

ಮೇಲ್ಕಂಡ ಎಲ್ಲಾ ವಿವರಗಳನ್ನು ದಿನಾಂಕ 20.11.2026 ರೊಳಗಾಗಿ ತಪ್ಪದೇ ಸಲ್ಲಿಸಲು ತಿಳಿಸಲಾಗಿದೆ.

ಈ ಮಾಹಿತಿ ಆಧರಿಸಿ ಪರೀಕ್ಷಾ ಕೇಂದ್ರಗಳನ್ನು ಹಂಚಿಕೆ ಮಾಡಲು ಕ್ರಮ ಜರುಗಿಸಲಾಗುವುದು.

ನಿಗದಿತ ಅವಧಿಯಲ್ಲಿ ಮಾಹಿತಿ ಸಲ್ಲಿಸದಿರುವ ಮಹಾವಿದ್ಯಾಲಯಗಳಿಗೆ ಪರೀಕ್ಷಾ ಕೇಂದ್ರಗಳನ್ನು ಹಂಚಿಕೆ ಮಾಡುವ ಬಗ್ಗೆ ವಿಶ್ವವಿದ್ಯಾಲಯವು ಸೂಕ್ತ ನಿರ್ಣಯ ತೆಗೆದುಕೊಳ್ಳಲಿದೆ.

12.11.26

ಕುಲಸಚಿವರು (ಮೌಲ್ಯಮಾಪನ)
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಗೆ,
ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರಿಗೆ,

ಪ್ರತಿಗಳು:

1. ಮಾನ್ಯ ಕುಲಪತಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿರವರ ಮಾಹಿತಿಗಾಗಿ.
2. ಕುಲಸಚಿವರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿರವರ ಮಾಹಿತಿಗಾಗಿ.
3. ವಿತ್ತಾಧಿಕಾರಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿರವರ ಮಾಹಿತಿಗಾಗಿ.
4. ಮುಖ್ಯಸ್ಥರು, ಗಣಕ ಕೇಂದ್ರ, ಪರೀಕ್ಷಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಈ ಸುತ್ತೋಲೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಲಾಗಿದೆ.

SCAN AnyScanner